ಎಂಬುದು ಇಂದು ಗುಡಾಣವಾಗಿ ಜಗದ ದೃಷ್ಟಿಗೆ ತುತ್ತಾಗುತ್ತಿರುವುದಕ್ಕೆ ತಾನು ಸಾವಧಾನವನ್ನು ಪಕ್ಕಕ್ಕಿರಿಸಿ ಅವಸರದ ಬಾಲ ಹಿಡಿದು ಓಡಲಾರಂಭಿಸಿದ್ದೆ ಕಾರಣವಲ್ಲವೇ? ಪ್ರತಿ ದಿನವೂ ಸೈಕಲ್ಲಿನಲ್ಲೇ ಊರು ಸುತ್ತುವಾಗ ಇರದಿದ್ದ, ಇದ್ದರೂ ಸಮಸ್ಯೆಯಾಗಿ ಎದ್ದು ನಿಲ್ಲದ ಹೊಟ್ಟೆ, ಇಂದು ತೊಡುವ ಬಟ್ಟೆಯ ಮಾನ ಕಳೆಯುವ ಮಟ್ಟಿಗೆ ಬೆಳೆದು ನಿಲ್ಲಲು ಬೈಕೂ ಕಾರಣವಲ್ಲವೇ? ವೇಗದ ಹಿಂದೆ ಹೋದಂತೆಲ್ಲ ಉಬ್ಬುತ್ತಿರುವ ದೇಹಕ್ಕೆ ಮತ್ತೆ ನಿಧಾನದೊಂದಿಗೆ ನಂಟು ಬೆಳೆಸದೇ ಹೋದರೆ ತಾನು ನೆಮ್ಮದಿಯಿಂದ ಬದುಕಬಲ್ಲೆನೆ? ಯಾವುದೇ ತರಾತುರಿ ತೋರದೆ ತಮ್ಮ ಪಾಡಿಗೆ ತಾವಿದ್ದ ನಾಲಿಗೆ ಮತ್ತು ಮೆದುಳಿಗೆ ಕೆಎಫ್ ಪ್ರೀಮಿಯಮ್ಮಿನ ನಶೆ ಮತ್ತು ರುಚಿ ಅಂಟಿಸಿದ್ದರ ಹಿನ್ನೆಲೆಯಲ್ಲಿಯೂ ವೇಗದ ಒಡಲಿಂದ ಹೊರಹೊಮ್ಮುವ ಆವೇಗದ ಮೇಲೆ ಮನಸ್ಸು ಮೋಹಗೊಂಡದ್ದೇ ಕಾರಣವಲ್ಲವೇ?

ನಿಧಾನದ ದಡದಿಂದ ಜಿಗಿದು ವೇಗದ ಹೊಳೆಯಲ್ಲಿ ಈಜಲಾರಂಭಿಸಿದ ಮೇಲೆಯೇ ತನ್ನ ದೇಹ ಮತ್ತು ಮನಸ್ಸು ಊದಿಕೊಂಡಿರುವುದೆಂಬ ಅರಿವಾದ ಮೇಲೆಯೇ ತಾನು ನಡೆಯಲಾರಂಭಿಸಿರುವುದೆಂಬ ಸತ್ಯವನ್ನು ಪ್ರತಿ ದಿನವೂ ಎದುರಾಗಿ ತನ್ನದೊಂದು ಬಿಟ್ಟಿ ಸಲಹೆ ಬಿಸಾಕುವ ಅಪ್ಪನ ಸ್ನೇಹಿತನೆಂಬ ಈ ಆಸಾಮಿಗೆ ಹೇಗೆ ಹೇಳುವುದೆಂಬ ಪ್ರಶ್ನೆ ಅವನೊಳಗೆ ಅಡ್ಡಾಡಲಾರಂಭಿಸಿತು.

ತಾನು ವಾಕ್ ಮಾಡಲಾರಂಭಿಸಿರುವುದು ದೇಹ ತೂಕ ಇಳಿಸಲೆಂದೇ ನಂಬಿಕೊಂಡಿರುವ ಹಿತೈಷಿಗಳ ಪಟ್ಟಿ ದೊಡ್ಡದಿರುವಾಗ, ಈ ಕ್ಷುಲ್ಲಕ ವಿಚಾರಕ್ಕೆ ತಾನೇಕೆ ಇಷ್ಟೆಲ್ಲ ತಲೆ ಕೆಡಿಸಿಕೊಳ್ಳಬೇಕೆಂದುಕೊಂಡನಾದರೂ ಅವನೊಳಗಿನ ಆಲೋಚನೆಗಳು ತೆಪ್ಪಗಿರಲು ಒಪ್ಪಿಕೊಳ್ಳಲಿಲ್ಲ.


ಹೀಗೆ ಒಂದು ದಿನ ಮನೆಯಿಂದ ಪಾರ್ಕ್‌ಗೆ ನಂಟು ಬೆಸೆಯುವ ರಸ್ತೆಯಲ್ಲಿ ನಡೆದುಕೊಂಡು ಬರುವಾಗ ಎದುರಾದ ಗೆಳೆಯನೊಬ್ಬ ಛೇಡಿಸಿದ್ದೂ ನೆನಪಾಯಿತು. ಏನ್ ಗುರು ನೀನು, ಹೋಗಿ ಹೋಗಿ ವಯಸ್ಸಾದ ಅಜ್ಜ ಅಜ್ಜಿಗಳು ಕೋಲಿಡ್ಕಂದು ನಡ್ದಾಡೋ ಪಾರ್ಕ್‌ಗೋಗಿ ದಿನಾ ವಾಕ್ ಮಾಡ್ತಿಯಲ್ಲ, ಅದ್ರು ಬದ್ಲು ಒಳ್ಳೊಳ್ಳೆ ಫಿಗರ್ಸ್ ಬರೋ ಯಾವ್ದಾದ್ರೂ ಒಳ್ಳೆ ಜಿಮ್‌ಗಾದ್ರೂ ಹೋಗ್ಬಾರ್ದಾ ಎಂದು ರೇಗಿಸಿದ್ದ ಗೆಳೆಯನ ಮಾತಿಗೆ ಅಷ್ಟೇನು ತಲೆ ಕೆಡಿಸಿಕೊಳ್ಳದ ತಾನು, ಈ ಆಸಾಮಿಯ ಮಾತುಗಳನ್ನು ಮೂಲೆಗಾಕದೇ ಇಷ್ಟೆಲ್ಲ ಚಡಪಡಿಸುವ ಅಗತ್ಯವಾದರೂ ಏನಿದೆ ಎಂದು ಗೊಣಗಿಕೊಂಡ.

ನಡೆಯುವುದೆಂದರೆ ಬರೀ ದೇಹದ ಚಲನೆಯಷ್ಟೆನಾ? ಓಡುವುದೆಂದರೆ ಅದು ದೇಹದ ಓಟವಷ್ಟೆನಾ? ಅವೆರಡೂ ಅಷ್ಟಷ್ಟೇ ಆಗಿದ್ದರೆ ತಾನು ಇಷ್ಟೆಲ್ಲ ಯೋಚಿಸುವ ಅಗತ್ಯವಿತ್ತೆ?

ನಡಿಗೆ ನನ್ನೊಡಲಿಗೆ ಎಷ್ಟೆಲ್ಲ ಸಂಭ್ರಮಗಳನ್ನು ಸುರಿಯುತ್ತದೆಂಬುದನ್ನು ಈ ಜಗತ್ತಿನೆದುರು ಪ್ರದರ್ಶಿಸಲು ಸಾಧ್ಯವೇ? ಇದುವರೆಗಿನ ಬದುಕಿನಲ್ಲಿ ಓಡುತ್ತ ಪಡೆದುಕೊಂಡ ನೋವಿನ ಪ್ರಮಾಣವೆಷ್ಟು ಎಂದು ಅಳೆದು ಯಾರೆದುರು ಸುರಿದು ತೋರಬೇಕಿದೆ?

ನಡೆಯಲಾರಂಭಿಸಿದ ಮೇಲಲ್ಲವೇ, ಅಪರಿಚಿತರ ನೋವುನಲಿವುಗಳು ಕಿವಿಯ ರಂಧ್ರಗಳ ಮೂಲಕ ಮನಸ್ಸಿಗೆ ರವಾನೆಯಾದದ್ದು? ನಡೆದೂ ಎಡವಿದರೂ ಬಿದ್ದು ಮೇಲೆದ್ದರೂ ನಿಗದಿತ ಅವಧಿಯಲ್ಲಿ ಗುರಿ ತಲುಪಲಾಗದಿದ್ದರೂ... ಗುರಿ ಕರುಣಿಸಲಾಗದ ನಿಟ್ಟುಸಿರನ್ನು ಅದರೆಡೆಗಿನ ಪಯಣದಿಂದಲೇ ಪಡೆದುಕೊಳ್ಳಬಹುದೆಂಬ ಸತ್ಯದ ಅರಿವಾದದ್ದು?

ಅವನು ಅವನೊಳಗೆ ಮಾತಾಡಿಕೊಳ್ಳುತ್ತಲೇ ಇದ್ದ... ಮನೆ ಬಾಗಿಲು ತೆರೆಯುವವರೆಗೂ.




**ಖ್ಯಾತ ಕಥೆಗಾರ್ತಿ ವಸುಮತಿ ಉಡುಪ ಅವರ**

# ಕಿಲುಬು

ಮಗಳು ಪೂರ್ಣಿಮಾಳ ಮದುವೆ ನಿಶ್ಚಯ ಮಾಡಿದ ಅಮ್ಮ ನಾಗಮ್ಮ, ಮಗ ಅನಂತ ಪದ್ಮನಾಭನ ಬಳಿ, ಬೇರೆ ಮನೆಯಲ್ಲಿ ನೆಲೆಸಿದ್ದ ಅಪ್ಪ ರಾಮಚಂದ್ರನಿಗೆ ಹೇಳಿ ಕಳಿಸಿದ ಸಂದೇಶವೇನು? ಹದಿನೇಳು ವರ್ಷದ ಹಿಂದೆ ಬಿರುಕು ಬಿಟ್ಟ ನಾಗಮ್ಮ–ರಾಮಚಂದ್ರ ಅವರ ದಾಂಪತ್ಯ ಮತ್ತೆ ಒಂದಾಗುತ್ತಾ?